Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Construction of Tank near Manchiladore.

ಶ್ರೀ ಬಿ. ಸಿ. ನಂಜುಂಡಯ್ಯ (ಕೋರ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ :—

"The demand under the head '19. Construction of Irrigation, Navigation, Embankment and Drainage Works' for Rs. 16,89,000 be reduced by Rs. 100 (to raise a debate on the immediate necessity of constructing a tank near Manchiladore in Hagalvadi Hobli, Gubbi Taluk)."

ಈ ಹಾಗಲವಾಡಿ ಹೋಬಳಿ ಯಾವಾಗಲೂ ಮಳೆ ಸಾಕಾದಷ್ಟು ಬಾರದೆ ಕ್ಷಾಮಕ್ಕೆ ಸಿಕ್ಕಿರುವ ಒಂದು ಹೋಬಳಿಯಾಗಿದೆ. ನಾನು ಹೇಳುವ ನ್ಯೂಳ ಫಾರೆಸ್ಟ್ ಪ್ರದೇಶ. ಅಲ್ಲಿ ಆ ಊರಿನ 8 ಮೈಲಿ ನುತ್ತ ಎಲ್ಲೂ ಯಾವ ಕೆರೆಯೂ ಇಲ್ಲ. ಈ 20ನೆಯ ಶತಮಾನದಲ್ಲೂ ಬಿತ್ತದ ಪೈರು ಹೇಗಿದೆಯೆಂದು ಕಾಣದಿರುವ ರೈತರು ಆ ಪ್ರದೇಶದಲ್ಲದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಅಂಥ ಕಡೆ ಒಂದು ಕೆರೆ ಆಗಬೇಕೆಂದು ಎರಡು ವರ್ಷಗಳಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೂ ಹೇಳಿ ಬಹಳವಾಗಿ ಪ್ರಯತ್ನಪಡುತ್ತಿದ್ದೇನೆ. ಅಲ್ಲಿ ನೀರಿನ ಆಸರೆಯಿದೆ; ಮನಸ್ಸಿದ್ದರೆ ನಿಜವಾಗಿಯೂ ಕೆರೆಯಾಗುತ್ತದೆ. ಎರಡು ವರ್ಷಗಳಿಂದ ಎಸ್ಟಿಮೇಟ್ ಮಾಡಬೇಕೆಂದು ಇಲಾಖೆಗೆ ಹೇಳಿದರೂ ಆಗಿರಲಲ್ಲ. ಈ ಸಭೆಯಲ್ಲಿ ಪ್ರಶ್ನೆ ಬಂದ ಮೇಲೆ ಎಸ್ಟಿಮೇಟ್ ಆಗಿದೆ. ಆದರೆ 4 ಕಡೆ ಕೆರೆಯಾಗುತ್ತದೆಂದು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ಎಸ್ಟಿಮೇಟ್ ಮಾಡಿದ್ದಾರೆಂದು ಗೊತ್ತಾಗಿದೆ. ಎರಡು ಕೆರೆಗಳ ಅಂದಾಜುಗಳಲ್ಲಿ ಒಂದು ಸಾವಿರ ರೂಪಾಯಿ ಕಡಮೆ ಬರುವ ಪರಿಸ್ಥಿತಿಯಿದೆ. 2 ಕೆರೆಗಳಿಗೆ ಬದಲಾಗಿ ಒಂದೇ ಕೆರೆ ಮಾಡಿದರೆ ಉಪಕಾರವಾಗುತ್ತದೆ. ಹೆಚ್ಚಾಗಿ ಮಾಡಲು ಸಾಧ್ಯವಿಲ್ಲ. ಅಲ್ಲಿ ಕೆರೆ ಕಟ್ಟಿದರೆ ನುತ್ತಲೂ ಇರುವ ಪ್ರದೇಶದಲ್ಲಿರುವ ಬಾವಿಗಳಿಗೆ ನೀರು ಬಂದು ಕುಡಿಯುವ ಪೈರಿಕ್ಕೆ ಸಿಕ್ಕುತ್ತದೆ. ಅಲ್ಲಿ ಮಾರ್ಚ್ ತಿಂಗಳಿನಿಂದ ಏಪ್ರಿಲ್‌ವರೆಗೂ ಕುಡಿಯಲು ನೀರಿಲ್ಲದೆ 4-5 ಮೈಲಿಗಳಿಂದ ನೀರನ್ನು ತರಬೇಕಾಗುತ್ತದೆ. ಈ ಕಷ್ಟವನ್ನು ನಿವಾರಣೆ ಮಾಡಬೇಕು.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಮಂಚಲ ದೊರೆ ಹತ್ತಿರ ಒಂದು ಕೆರೆ ಕಟ್ಟುವ ಬಗ್ಗೆ ಎಸ್ಟಿಮೇಟ್ ತಯಾರಾಗಿ ಅದು ಚೀಫ್ ಇಂಜನಿಯರ ಆಫೀಸಿನಲ್ಲಿ ಈಗ ಪರಿಶೀಲನೆಯಲ್ಲಿದೆ. ಅದು ಬಂದ ನಂತರ ಸೂಕ್ತಕ್ರಮ ಕೈಕೊಳ್ಳುತ್ತೇವೆ. ಆದ್ದರಿಂದ ಮಾನ್ಯ ನದನ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

Sri B. C. NANJUNDAIAH.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 16,89,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works'."

The motion was adopted.

DEMAND No. 12—GENERAL ADMINISTRATION STATE LEGISLATURE AND ELECTION CHARGES.

25. GENERAL ADMINISTRATION (B. PARLIAMENT AND THE STATE LEGISLATURE AND C. ELECTION FOR LEGISLATURE.)

Mr. SPEAKER.—Motion moved:

"That a sum not exceeding Rs. 12,75,700 be granted to the Government to defray the charges which will come in course of payment during the year ending 31st day of March 1955, in respect of 'General Administration (State Legislature and Election Charges.)'"

The first cut motion is in the name of Sri Srinivasa Iyengar. So far as this cut motion is concerned, it deals mostly with the Legislature. There is the Law Minister and the Chairman in the other House; so, it will not be all right to discuss it here. It is better that the Hon'ble Member leaves it.

Sri S. SRINIVASA IYENGAR—Very well, Sir.

Necessity to abolish Legislative Council.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಾಗಿದೆ.—

"The demand under the head "25. General Administration (B.

Parliament and the State Legislature and C. Election for Legislature)" for Rs. 12,75,700 be reduced by Rs. 100 (to urge the necessity of abolishing the Legislative Council in Mysore)."

ಸ್ವಾಮಿ, ವಿಧಾನ ಪರಿಷತ್ತು ಎಂಬುದು ಒಂದು ದೊಡ್ಡ ಬಿಳಿ ಆನೆಯಿದ್ದಹಾಗೆ, ಇದು ಬರೀ ಭೂಷಣಕ್ಕಾಗಿ, ಆಡಂಬರಕ್ಕಾಗಿ ಇರುವುದು. ಇದರಿಂದ ಲೆಜಿಸ್ಲೇಚರಿಗಾಗಲಿ, ದೇಶಕ್ಕಾಗಲಿ ಯಾವ ವಿಧವಾದ ಸಹಾಯವೂ ಇಲ್ಲ, ಅನುಕೂಲವೂ ಇಲ್ಲ. ಏಕೆಂದರೆ Financial matters ಬಂದಾಗ ಅದಕ್ಕೆ ಓಟು ಕೊಡುವ ಅಧಿಕಾರ ಕೂಡ ಇಲ್ಲ. ಆ ಸಭೆ ಏನಾದರೂ ಸಲಹೆ ಕೊಡುವುದಕ್ಕಾಗಿ ಇರಬೇಕೇ ಹೊರತು ಮತ್ತೇನೂ ಇಲ್ಲ. ಈ ಕೆಲಸವನ್ನು ಯಾರು ಬೇಕಾದರೂ ಮಾಡಬಹುದು. ಇದಕ್ಕಾಗಿ 2 ಲಕ್ಷ ಚಿಲ್ಲರೆ ಖರ್ಚು ಮಾಡುವುದು ಬಹಳ ಅನ್ಯಾಯ. ಅದರಲ್ಲೂ ಸಂಸ್ಥಾನದ ಆದಾಯದಲ್ಲಿ ಬೇಕಾದಷ್ಟು ಖೋತಾ ಇರುವಾಗ ವಿಧಾನ ಪರಿಷತ್ತಿಗಾಗಿ ಇಷ್ಟು ಹಣ ವ್ಯಯ ಮಾಡುವುದು ಸೂಕ್ತವಲ್ಲ. ಇದೂ ಅಲ್ಲದೆ ಅದು ರೆಪ್ರೆಸೆಂಟೇಟಿವ್ ಬಾಡಿ ಸಹ ಅಲ್ಲ. ಅದರಲ್ಲಿ 13 ಜನ ನಾಮಿನೇಟೆಡ್ ಮೆಂಬರುಗಳು ಬೇರೆ ಇದ್ದಾರೆ. ಆ ಹದಿಮೂರರಲ್ಲಿ 11 ಜನ ಕಾಂಗ್ರೆಸ್ ಪಕ್ಷದವರು. ಜೊತೆಗೆ ಈಗ ಡಿಸ್ಟ್ರಿಕ್ಟ್ ಬೋರ್ಡುಗಳನ್ನು ಬೇರೆ ವಜಾ ಮಾಡಿದ್ದಾರೆ. ಆದರೂ ಸಹ ಆ ಬೋರ್ಡಿನ ಪ್ರತಿನಿಧಿಗಳಾಗಿ ಬಂದಿರುವ ಸದಸ್ಯರುಗಳನ್ನು ಇನ್ನೂ ಮುಂದುವರಿಸುತ್ತಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡುಗಳು ವಜಾ ಆಗಿರುವಾಗ ಅದರ ಮೂಲಕ ಬಂದಿರುವ ಸದಸ್ಯರು ಎಷ್ಟು ಮಟ್ಟಿಗೆ ಪ್ರಾತಿನಿಧ್ಯ ಹೊಂದಿದ್ದಾರೆಂಬುದನ್ನು ಯೋಚನೆ ಮಾಡಬೇಕು. ಇದನ್ನು ಈ ದಿವಸ ಮಾನ್ಯ ಮಿತ್ರರು ಕೆಲವರು ಕೂಡ ಹೇಳಿದ್ದಾರೆ.

ಇದಲ್ಲದೆ ಇನ್ನೊಂದು ವಿಶೇಷವೇನೆಂದರೆ, ಈಗ ಕಟ್ಟುತ್ತಿರುವ ವಿಧಾನಸೌಧವೆಂಬ ಕಟ್ಟಡದಲ್ಲಿ ಸಹ ವಿಧಾನ ಪರಿಷತ್ತಿನವರಿಗಾಗಿ ಒಂದು wing ನ್ನು ಸಹ reserve ಮಾಡಿದ್ದಾರೆ. ಈಗ ನಮಗೆ ಬೇಕಾದಷ್ಟು ಕೋಟ್ಯಂತರ ರೂಪಾಯಿಗಳ ಖೋತಾ ಇರುವಾಗ ಅನವಶ್ಯಕವಾದ ವಿಧಾನ ಪರಿಷತ್ತಿಗಾಗಿ, ಅದರಲ್ಲಿರುವ Guardian Angelsಗಾಗಿ ಒಂದು wing reserve ಮಾಡಿ ಅದಕ್ಕಾಗಿ 10—15 ಲಕ್ಷ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡುವುದು monumental waste. ಈ ತರಹ ಮಾಡುತ್ತಾ ಬಡ ರೈತರ, ಸಾಮಾನ್ಯ ದೇಶದ ಪ್ರಜೆಗಳ, ಲಕ್ಷಾಂತರ ಜನರ ಹಣವನ್ನು ಇದಕ್ಕಾಗಿ ವಿನಿಯೋಗಿಸುವುದು ಸರಿಯಲ್ಲ. ಆ ಸಭೆಯ ಸದಸ್ಯರನ್ನು * * * * * * ಸೇರಿಸಿ ಒಂದು ಸಭೆ ಮಾಡಿ ಅದಕ್ಕಾಗಿ ಖರ್ಚು ಮಾಡುವುದು ನಮ್ಮ ದುರ್ದೈವವೋ ಏನೋ ತಿಳಿಯದು.

Mr. SPEAKER.—Don't you think, Sri Narayana Reddy, to presume so many things is uncharitable ?

Sri B. V. NARAYANA REDDY.—In my opinion they are all facts; whether the Government takes it or not, it is left to them.

ಇದರಲ್ಲಿ ಇನ್ನೊಂದು ವಿಚಾರ ದೊಡ್ಡದು ಯಾವುದೆಂದರೆ, 'Back door method' ಎಂದು ಹೇಳುವ ರೀತಿಯಲ್ಲಿ ನರಿಯಾದ ಜನರು ಸಿಕ್ಕದಿದ್ದರೆ ಯಾರನ್ನಾದರೂ ಆ ರೀತಿಯಲ್ಲಿ ಪೀಲ್ಮನೆಯಲ್ಲಿ elders ಆಗಿ ಕೂಡಿಸಲು ಅವಕಾಶ ಮಾಡಬಹುದಾಗಿದೆ. Undemocratic methodನಲ್ಲಿ ಎಷ್ಟು ಸೌಕರ್ಯ ಬೇಕೋ ಅಷ್ಟನ್ನು ಮಾಡಿಕೊಳ್ಳಲು ವಿಧಾನ ಪರಿಷತ್ತನ್ನಿಟ್ಟುಕೊಳ್ಳುವುದು ಸೂಕ್ತವಲ್ಲ. ಅದನ್ನು ಬೇಗ ಕೆಡವಿಬಿಡಿ ಎಂದು ಇಷ್ಟು ಮಾತ್ರ ಹೇಳಿ ಈ ಖೋತಾ ಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

Mr. SPEAKER.—Cut motion moved :

"That this demand be reduced by Rs. 100."

Sri H. C. LINGA REDDY (Malur).—Sir, there is no doubt that the Upper House in our State is more an ornament than a necessity. It is only a show and for the purpose of that show we are keeping the Upper House at a cost of two lakhs of rupees. At a time when we are faced with deficits in our finances, it is very necessary for us to think whether there is any necessity for a House of this kind, especially at a time when other States in India, bigger than Mysore in area, States like Hyderabad, Orissa, etc., have no Upper House. Prior to the Constitution there were Upper Houses in some of the States and they have foregone the luxury of this Upper House now. A time has come to think whether the Upper House is necessary for Mysore. In my opinion there is no necessity absolutely for it at all. One of the justifications given for having this Upper House is that there will be sober-minded men in the Upper House and they will check the hasty actions of the Lower House and so on. Sir, we know how far the Upper House is influencing the decisions of this House. Therefore, I feel there is no necessity of the Upper House at present and we have got to recommend to the President of India and the Parliament that we do not need the Upper House.

4-30 P.M.

ಶ್ರೀ ಎಸ್. ಗೋಪಾಲಗೌಡ (ಸಾಗರ—ಹೊಸನಗರ).—ಸ್ವಾಮಿ, ಶ್ರೀಮಾನ್ ಬಿ. ವಿ. ನಾರಾಯಣರೆಡ್ಡಿಯವರು ಈ ಸಭೆಯಮುಂದೆ ಮಂಡಿಸಿರತಕ್ಕ ಖೋತಾ ನಿರ್ಣಯವನ್ನು ಸಮರ್ಥಿಸುತ್ತಾ ಈ ಸಂಸ್ಥಾನದಲ್ಲಿ ಈಗಿರುವ ವಿಧಾನ ಪರಿಷತ್ತನ್ನು ರದ್ದುಗೊಳಿಸುವುದುಚಿತವಾದುದೆಂದು ನಾನೂ ಅಭಿಪ್ರಾಯಪಡುತ್ತೇನೆ. ನಾವು ಈ ಪ್ರೈಥಾನಿಕ ಪ್ರಜಾತತ್ವವನ್ನು

*Contains words expunged under the direction of the Speaker.

(ಶ್ರೀ ಎಸ್. ಗೋಪಾಲಗೌಡ.)

ಒಪ್ಪಿಕೊಂಡಿದ್ದೇವೆ ಮತ್ತು ರಾಜ್ಯಾಂಗದ ವಿಧಿಗಳಿಗನುಸಾರವಾಗಿ ರಾಜ್ಯವನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ರಾಜ್ಯಾಂಗದ ವಿಧಿಗನುಸಾರವಾಗಿ ನಮ್ಮ ದೇಶದ ಕೆಲವು ಸಂಸ್ಥಾನಗಳಲ್ಲೂ, ಪ್ರಾಂತ್ಯಗಳಲ್ಲೂ ಎರಡು ಮನೆಗಳ ಅವಕಾಶವನ್ನು ಕಲ್ಪಿಸಿರುತ್ತಾರೆ. ಮೈಸೂರು ಸಂಸ್ಥಾನದಲ್ಲ ಪೊದಲಿನಿಂದಲೂ ಎರಡು ಮನೆಗಳಿದ್ದು ಅದನ್ನೇ ಈಗಲೂ ಮುಂದುವರಿಸಿಕೊಂಡು ಬಂದಿದೆ. ಆದರೆ ಅನುಭವದಲ್ಲಿ ಈಗ ಪ್ರಾಂತ್ಯಗಳಲ್ಲಿ ಮತ್ತು ಸಂಸ್ಥಾನಗಳಲ್ಲಿ ಇಂತಹ ಎರಡು ಮನೆಗಳ ಅವಶ್ಯಕತೆ ಇಲ್ಲವೆಂಬುದು ಕಂಡು ಬಂದಿದೆ. ಕೇಂದ್ರದಲ್ಲಿ ಎರಡು ಮನೆಗಳ ಅವಶ್ಯಕತೆ ಇದೆ. ಒಂದು ಲೋಕಸಭೆ, ಇನ್ನೊಂದು ರಾಜ್ಯಪರಿಷತ್ತು. ಏಕೆಂದರೆ, ಅಲ್ಲಿ ಅನೇಕ ಪ್ರಾಂತ್ಯಗಳ ಮತ್ತು ಸಂಸ್ಥಾನಗಳ ಪ್ರತಿನಿಧಿಗಳು ಇರಬೇಕಾದ ಅಗತ್ಯವಿದೆ. ಇನ್ನು ಈ ಪ್ರಜಾ ತಂತ್ರದ ಮೂಲವನ್ನು ಹುಡುಕುತ್ತಾ ಹೋದರೆ, ಇಂಗ್ಲೆಂಡಿನಲ್ಲಿ ಪೊದಲು ಹೌಸ್ ಆಫ್ ಲಾರ್ಡ್ಸ್ ಮಾತ್ರ ಇತ್ತು. ಆಮೇಲೆ ಹೌಸ್ ಆಫ್ ಕಾಮನ್ಸ್ ಬಂತು. ಈಗ ಕಾಮನ್ಸ್ ಸಭೆಗೇ ವಿಶೇಷವಾಗಿ ಎಲ್ಲಾ ಅಧಿಕಾರವಿದೆ. ಆದರೂ ಸಹ ಹೌಸ್ ಆಫ್ ಲಾರ್ಡ್ಸ್ ಎಂಬುದು ಇನ್ನೂ ಇದೆ. ಇಲ್ಲಿ ನಮ್ಮ ರಾಜ್ಯಾಂಗ ವಿಧಿಗನುಸಾರವಾಗಿ ನಡೆಯುವುದಾಗಿದ್ದರೆ ಮೇಲ್ಮನೆಯ ಅವಶ್ಯಕತೆಯಿಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಈಗ ಪ್ರಜಾಧಿಕಾರವನ್ನು ಪ್ರತಿಬಿಂಬಿಸುತ್ತಿರುವ ಈ ಕೆಳ ಮನೆಯೇ ಎಲ್ಲ ಅನುಕೂಲವನ್ನೂ ಒದಗಿಸಿ ಕೊಡುತ್ತಿರುವಾಗ, ಈ ಮೇಲ್ಮನೆ ಇರುವುದು ವ್ಯರ್ಥ ಖರ್ಚಿನ ವ್ಯವಸ್ಥೆಯೆಂದು ತಿಳಿಸಲಿಚ್ಛಿಸುತ್ತೇನೆ. ಇದಕ್ಕಿಂತ ಹೆಚ್ಚಾಗಿ ಈ ವಿಚಾರವಾಗಿ ಏನನ್ನೂ ಸೂಚಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈಗ ಅನಿವಾರ್ಯವಾಗಿ ಈ ವ್ಯವಸ್ಥೆಯನ್ನು ರೂಢಿಸಿಕೊಂಡು ಹೋಗಬೇಕಾಗಿದೆ. ಈಗಾಗಲೇ ನಮ್ಮ ಅನುಭವಕ್ಕೆ ಬಂದಿದೆ, ಮುಂಬಯಿ ಪ್ರಾಂತ್ಯದಲ್ಲಿ ಈಗಾಗಲೇ ಅಲ್ಲಿಯ ವಿಧಾನ ಸಭೆಯಲ್ಲಿ ವಿಧಾನ ಪರಿಷತ್ತು ರದ್ದಾಗಬೇಕೆಂದು ಒಂದು ನಿರ್ಣಯ ಅಂಗೀಕಾರವಾಗಿದೆ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯೂ ಸಹ ಈ ವಿಷಯವನ್ನು ತೀರ್ಮಾನ ಮಾಡುವುದಕ್ಕೆ ಆಯಾ ಪ್ರಾಂತ್ಯಗಳಿಗೆ ಬಿಟ್ಟಿರುತ್ತಾರೆ. ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯೂ ಸಹ ಪ್ರಾಂತ್ಯ ಮತ್ತು ಸಂಸ್ಥಾನಗಳಲ್ಲಿ ಎರಡು ಮನೆಗಳ ಅವಶ್ಯಕತೆ ಇಲ್ಲ, ಮೇಲು ಮನೆ ಎಂಬುದು ಹಣಕಾಸಿನ ಮೇಲೆ ಯಾವ ಒಂದು ಅಧಿಕಾರವನ್ನೂ ಹೊಂದಿಲ್ಲ ಮತ್ತು ಸ್ವತಂತ್ರವಾಗಿಲ್ಲ, ಆದುದರಿಂದ ಅದನ್ನು ರದ್ದುಗೊಳಿಸುವುದರಿಂದ ಯಾವ ಹಾನಿಯೂ ಇಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ. ಆದುದರಿಂದ ನಮ್ಮ ಸಂಸ್ಥಾನದಲ್ಲಿಯೂ ಸಹ ಈಗಿರತಕ್ಕ ವಿಧಾನ ಪರಿಷತ್ತನ್ನು ರದ್ದುಗೊಳಿಸುವುದರಿಂದ ರಾಜ್ಯಾಂಗ ರೀತಿಯಲ್ಲಾಗಲಿ ಅಥವಾ ಪ್ರಜೆಗಳಿಗೆ ಪ್ರಾತಿನಿಧ್ಯ ಒದಗಿಸಿ ಕೊಡುವ ರೀತಿಯಲ್ಲಾಗಲಿ ಹಾನಿಯಿಲ್ಲ. ಮೇಲಾಗಿ, ಇದನ್ನು ರದ್ದುಗೊಳಿಸುವುದರಿಂದ ಹಣಕಾಸಿನ ದೃಷ್ಟಿಯಿಂದಲೂ ಕಾರ್ಯದಕ್ಷತೆಯ ದೃಷ್ಟಿಯಿಂದಲೂ ಮತ್ತು ಹೆಚ್ಚು ತ್ವರಿತವಾಗಿ ಕೆಲಸ ಕಾರ್ಯ ನಡೆಯುವ ದೃಷ್ಟಿಯಿಂದಲೂ ಕ್ಷೇಮಕರವೆಂದು ಹೇಳಿ ನಾನೂ ಈ ಖೋತಾ ನಿರ್ಣಯವನ್ನು ಸಮರ್ಥಿಸುತ್ತೇನೆ.

Sri A. BHEEMAPPA NAIK (Molakalmuru).—Sir, I feel that the criticism, especially some words expressed by my friend Sri Narayana Reddy, are uncharitable, not to speak that they are uncalled for. It is one thing to say that that House does not serve a very good purpose. But is quite a different thing to use such words.....

Sri B. V. NARAYANA REDDY.—Some of them I said.

Sri A. BHEEMAPPA NAIK.—Even if it refers to one of them, it does not serve and it will not do credit to the dignity of any House to use such words, especially when they are not backed up by facts and figures. I am very sorry that he should have used such words.

Sri B. V. NARAYANA REDDY.—The concrete fact of waste of budget on that will bring in such words.

Mr. SPEAKER.—No, no. That is not reasonable.

Sri A. BHEEMAPPA NAIK.—I am very sorry that we, members of this House, should address our elders with such words, whatever it is. This is not the only instance of its kind. Take any democratic country in the world. Just to stop hasty legislation two such Houses are there in existence. There is the example of the House of Lords and the House of Commons. In America there is an Upper House; so also in several States. This is an experiment we are making. Ours is after all a new Constitution. We have just started. Not even two years have elapsed. We have formed a House and that House has been elected partly if not wholly. It is under the Constituion that that House is in existence. Let us not be too hasty in judging the merit or the demerit of that House or the merit or the demerit of the members of that august House. It is just and proper that we have to wait, that we have to wait for some time. We have after all just begun and I do not know what utility there will not be when legislative measures of far-reaching type are passed here and go to the Upper House. In fact we have derived much inspiration by the advice or opinion offered by that House. Even the Cabinet must have derived much help from them. When such is the case,—I do not want to repeat those words,—any way, it would not be proper for us to send them

such compliments as those which my friend paid. They have done their best. And if really we think that that House does not serve any purpose, let us then think over. To say that spending Rs. 2 lakhs for a Legislative House of that type would be wasteful is uncalled for. Why not we at the same time set an example, and why not especially my friend Sri Narayana Reddy who is rich enough, say that the Rs. 150 he is getting is wasteful and he for one can give it up and thereby there will be saving? It is not correct to say that expenditure on that House is wasteful.

Sri B. V. NARAYANA REDDY.—Why should I alone forego? Let every one forego.

Sri A. BHEEMAPPA NAIK.—What I say is, they are there and you have to pay. If you decide and say finally 'We do not want that House,' that is a different thing altogether. But I feel that the time has not yet come to say that. The Central Government has given us the option or the freedom to state whether it serves useful purpose or any such thing. Let us wait for some time, at least until the end of this term till the general election takes place. At the end of the term, if we feel like that House does not serve any purpose, we are at liberty to say that it has not been of any use. Then we shall think over. But I feel that that House is necessary in order to prevent hasty legislation, in order to give weighty advice when necessary, in order to see that legislation that is passed is properly done. In order to do that, the presence of that House, at least for some years to come, is very necessary and we should not experiment on things so quickly brushing aside the possibilities of the usefulness of that House.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ನಾನು ಈ ಖೋತಾ ನಿರ್ಣಯವನ್ನು ಸಮರ್ಥಿಸಿ ಒಂದೆರಡು ಮಾತುಗಳನ್ನು ಆಡುತ್ತೇನೆ. ನಮ್ಮ ರಾಷ್ಟ್ರದಲ್ಲಿ 28 ಸಂಸ್ಥಾನಗಳಿವೆ. ಅವುಗಳ ಪೈಕಿ 6 ಸಂಸ್ಥಾನಗಳಲ್ಲಿ ಮಾತ್ರ ಈ ಮೇಲಿನ ಮನೆ ಇದೆ. ಈ ಸಂಸ್ಥಾನಗಳಲ್ಲಿ ಮೇಲಿನ ಮನೆ ಇರತಕ್ಕದ್ದು ಇತರ ದೇಶಗಳ ಮಾದರಿಯಂತೆ ಎಂದು ಶ್ರೀ ಭೀಮಪ್ಪನಾಯಕರು ಹೇಳಿದರು. ಅಲ್ಲೆಲ್ಲಾ Federal System of Government ಇದೆ. ನಮ್ಮಲ್ಲಿ ಆಡಳಿತ ಕೇಂದ್ರೀಕೃತವಾಗಿದೆ. ನಾನು 2 ಲಕ್ಷ ರೂಪಾಯಿ ಖರ್ಚು ಮಾಡುತ್ತಾ ಇದ್ದೀರಿ ಎಂದು ದುಡ್ಡಿನ ವಿಚಾರದ ಮೇಲೆ ಮಾತನಾಡುತ್ತಿಲ್ಲ. ಅದರಿಂದ ಉಸಯೋಗ ಇದ್ದರೆ ಅದು ಇರುವುದಕ್ಕೆ ಯಾರದೂ ಅಡ್ಡಿ ಇಲ್ಲ. ಅದೂ ಅಲ್ಲದೆ (ಬಿ) ಸ್ಟೇಟ್‌ನಲ್ಲಿ ಮೈಸೂರು ಒಂದರಲ್ಲೇ ಈ ಮೇಲಿನ ಮನೆ ಇರತಕ್ಕದ್ದು. ಯಾವ ದೃಷ್ಟಿಯಿಂದ ನೋಡಿದರೂ ಕೂಡ ಇದು ಇರುವುದು ಅನಾವಶ್ಯಕ ಎಂಬುದು ಸ್ಪಷ್ಟವಾಗಿದೆ. ಮೊನ್ನೆ ತಾನೆ ಬೊಂಬಾಯಿ ಶಾಸನ ಸಭೆಯಲ್ಲಿ ಈ ಮೇಲು ಮನೆ ಅನಾವಶ್ಯಕ ಎಂದು ತೀರ್ಮಾನ ಮಾಡಿ ನಿರ್ಣಯವನ್ನು ಕೇಂದ್ರಕ್ಕೆ ಕಳುಹಿಸಿದ್ದಾರೆ. ಕೇಂದ್ರದ ಪಾರ್ಲಿಮೆಂಟಿನಲ್ಲೂ ಸಹ ನಿರ್ಣಯ ತಂದು ಈ ಮೇಲಿನ ಮನೆಗಳನ್ನು ರದ್ದು ಮಾಡುತ್ತೇವೆ ಎಂದು ಪ್ರಶ್ನೆಗೆ ಉತ್ತರವಾಗಿ ಹೋಂ ಮಿನಿಸ್ಟರು ಹೇಳಿದ್ದಾರೆ. ಈಗ ನಮ್ಮ ಅಸೆಂಬ್ಲಿಯಿಂದ ರಾಜ್ಯಾಂಗದ ಪ್ರಕಾರ ನಿರ್ಣಯ ಮಾಡಿ ಕಳುಹಿಸಬೇಕಾಗಿದೆ. ನಮ್ಮ ಅಭಿಪ್ರಾಯ ಏನು ಎಂಬುದನ್ನು ನಾವು ತಿಳಿಸಬೇಕಾಗಿದೆ. ಈಗ ಸಾಮಾನ್ಯವಾಗಿ ಮೇಲಿನ ಮನೆ ಅನಾವಶ್ಯಕ ಎಂದು ಪ್ರತಿಯೊಬ್ಬರ ಅಭಿಪ್ರಾಯ. ಇದನ್ನು ಆಗಲೇ ಹೇಳಿದ್ದಾರೆ. ಅದಕ್ಕೆ ಕಾಲಬೇಕು, 3 ವರ್ಷ ಬೇಕು, 6 ವರ್ಷ ಬೇಕು ಎನ್ನುವುದು ಅವರವರ ಅಭಿಪ್ರಾಯ. ಮೇಲಿನ ಮನೆಯಿಂದ ಏನಪ್ಪಾ ಆಗುತ್ತಿದೆ ಎಂದರೆ ಇಲ್ಲಿ ನಡೆದದ್ದು ಪ್ರತಿಯೊಂದೂ ಕೂಡ ಅಲ್ಲಿ ರಿಪೀಟ್ ಆಗುತ್ತಿದೆ. ಇಲ್ಲಿ ಯಾವುದನ್ನು ಹೇಳುತ್ತೇವೋ ಅವುಗಳನ್ನೇ ಅಲ್ಲೂ ಹೇಳುತ್ತಾರೆ. ಇಲ್ಲಿ ಏನು ಜವಾಬು ಮಂತ್ರಿಗಳು ಕೊಡುತ್ತಾರೋ ಅಲ್ಲಿಯೂ ಅದೇ ಜವಾಬುಕೊಡಬೇಕು.

Sri A. BHEEMAPPA NAIK.—That is the case everywhere, all over the world.

Sri B. HUTCHE GOWDA.—What are those countries, I want to know. ಈಗ ನಮ್ಮ ದೇಶದ ನೆರೆಹೊರೆ ಪ್ರಾಂತ್ಯದಲ್ಲಿ ಇಲ್ಲದೇ ಇರುವಾಗ ನಮಗೆ ಏನು ಅಂಥ ಅವಶ್ಯಕತೆ ಇದೆ, ಇದರಲ್ಲಿ ಏನು ಮುಖ್ಯವಾದ ಅಂಶ ಇದೆ ಎಂಬುದೂ ಒಂದು ಪ್ರಶ್ನೆ. ಕೇಂದ್ರದಲ್ಲಿ ರಕ್ಷಣೆ ವಿಚಾರ ಇದೆ. ಇನ್ನು ಅನೇಕ ಮುಖ್ಯ ವಿಚಾರಗಳು ಇವೆ. ಅಲ್ಲಿ ಎರಡು ಶಾಸನ ಸಭೆಗಳೂ ಇರುವುದನ್ನು ಒಪ್ಪಿಕೊಳ್ಳಬಹುದು. ಸಂಸ್ಥಾನಗಳಲ್ಲಿ ಇದು ಅನಾವಶ್ಯಕ. ಯಾವ ಸಂಸ್ಥಾನದಲ್ಲೂಕೂಡ ಇದು ಇರಲಿ ಎಂಬ ಅಭಿಪ್ರಾಯ ಇಲ್ಲ. ನಾನಾಗಲೇ ಹೇಳಿದ ಹಾಗೆ, 22 ಸಂಸ್ಥಾನಗಳಲ್ಲಿ ಇದು ಇಲ್ಲವೇ ಇಲ್ಲ. ಇರುವ ಪ್ರಾಂತ್ಯಗಳಲ್ಲೂ ಕೂಡ, ಬೊಂಬಾಯಿನಲ್ಲಿ ಆಗಲೇ ತೀರ್ಮಾನ ಮಾಡಿದ್ದಾರೆ, ಬಾಕಿಕಡೆಗಳಲ್ಲೂ ಇವೊತ್ತೋ ನಾಳೆಯೋ ಆಗುತ್ತದೆ. ಆಂಧ್ರಪ್ರಾಂತ್ಯ ರಚನೆಯಾಯಿತು, ರಚನೆಯಾಗುತ್ತಲೇ ಮೇಲು ಮನೆಯ ಸದಸ್ಯರನ್ನು ಮನೆಗೆ ಕಳುಹಿಸಿದರು. ಅದು ನಮಗೆ ಇಂಡಿಕೇಷ್ಟ ಇದ್ದ ಹಾಗೆ ಇದೆ. ಆಂಧ್ರ ಶಾಸನ ಸಭೆಯಲ್ಲಿ ಮೇಲು ಮನೆಯನ್ನು ತೆಗೆದು ಬಿಟ್ಟಿದ್ದಾರೆ. ಅಂಥದರಲ್ಲಿ ಬೇಕೇ ಬೇಡವೇ ಎಂಬ ಬಗ್ಗೆ ಯಾವ ಅಭಿಪ್ರಾಯ ಇಟ್ಟು ಕೊಂಡಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಇಷ್ಟೆಲ್ಲಾ ಇದ್ದೂ ಅನೇಕರು ಮೇಲು ಮನೆ ಇರಬೇಕೆಂಬುದಾಗಿ ಹೇಳುತ್ತಿರುವುದು ಅರ್ಥವಾಗುವುದಿಲ್ಲ. ಅದು ಸೂಪರ್ ಫ್ಲುಯಸ್ಸು, ಅನಾವಶ್ಯಕ, ಕೆಲಸಕಾರ್ಯಗಳಿಗೆ ಇಲ್ಲದೇ ಇರತಕ್ಕ ತೊಂದರೆ ಅಡಚಣೆ ಬರುತ್ತಿದೆ. ಇದು ಇಲ್ಲದಿದ್ದರೆ ಸುಲಲಿತವಾಗಿ ಎಲ್ಲಾ ಕೆಲಸ ಕಾರ್ಯಗಳೂ ನಡೆಯುತ್ತವೆ. ಅಂಥ ದೊಡ್ಡದಾದ, ಕ್ಲಿಷ್ಟವಾದ ಸಮಸ್ಯೆ ಚರ್ಚೆಮಾಡತಕ್ಕದ್ದು ದೇಶ ರಕ್ಷಣೆಯ ವಿಚಾರದಲ್ಲಿ ಬರತಕ್ಕದ್ದೇ ಹೊರತು ಬಾಕಿ

ಸಾಮಾನ್ಯವಾದ ನಮ್ಮ ಆಡಳಿತ ದೃಷ್ಟಿಯಿಂದ ಅಂಥ ಯಾವ ಕಷ್ಟವಾದ ಸಮಸ್ಯೆಗಳೂ ಬರುವುದಿಲ್ಲ. ಆ ರೀತಿ ಚರ್ಚೆಮಾಡಬೇಕಾದ ಅವಶ್ಯಕತೆಯೂ ಇಲ್ಲ. ಆದ್ದರಿಂದ ಈ ದ್ವಿಗುಣಿತವಾಗಿ ಕೆಲಸ ನಡೆಯುವುದನ್ನು ಖಂಡಿತವಾಗಿ ತಪ್ಪಿಸಬೇಕಾದದ್ದು ಅವಶ್ಯಕ ಎಂದು ಹೇಳಿ ಇದನ್ನು ಸಮರ್ಥಿಸುತ್ತೇನೆ.

Sri S. SRINIVASA IYENGAR (T.-Narasipur).—Sir, I support the cut motion. Bicameral Legislature in Mysore State is really a matter of superfluity. In the first place, if it is intended to serve as a check on hasty legislation, I can say that any Bill referred to a Select Committee of this House can as well serve the same purpose. If it is intended to serve the principle of functional representation, you can as well expand this House and see that such representation is given.

Sri A. BHEEMAPPA NAIK.—There is no provision in the Constitution.

Sri S. SRINIVASA IYENGAR.—You can as well amend the Constitution.

And so far as the technical and expert advice is concerned on any Bill, we can appoint a committee of this House and invite technical opinion and we have powers to request anybody to come and give us that technical advice that we want and change the provisions of the Bill. Therefore, taking all these into consideration, spending nearly two lakhs of rupees can easily be avoided. In the words of Chutam, a famous diplomat of France: 'It is an avoidable luxury and a pompous futility.' If suppose the Upper House agrees with this House, then the existence of the Legislative Council as the Upper House is really superfluous. Supposing it disagrees, once again, we do not agree with the opinion of the Upper House. Sir, it reminds me what the Caliph said once when he went to the Library at Alexandria.

> "Do these books agree with Quoran? If they agree, they are not necessary. If they do not agree, these Books are to be destroyed."

Well, we may not feel the same way. When it is only a question of having some check on our legislation, we can as well do it in this House and the existence of the Upper House or the Bicameral Legislature for a small State like Mysore, is perhaps beyond our means.

ಶ್ರೀ ಟಿ. ಎಸ್. ಮೂಡಲಗಿರಿಗೌಡ (ಕುಣಿಗಲ್).—ಸ್ವಾಮಿ, ಅಧ್ಯಕ್ಷರೇ, ಇದುವರೆಗೂ ಮೇಲು ಮನೆ ಅನಗತ್ಯ ಎಂಬ ವಿಷಯದಲ್ಲಿ ಶ್ರೀಮಾನ್ ನಾರಾಯಣ ರೆಡ್ಡಿಯವರ ಖೋತಾ ನಿರ್ಣಯದ ಮೇಲೆ ಚರ್ಚೆ ನಡೆದಿದೆ. ಭಾಷಣಗಳನ್ನು ಕೂಡ ನಾವು ಕೇಳಿದ್ದೇವೆ. ಆದರೆ ರಾಜ್ಯಾಂಗದ ಪ್ರಕಾರ ಯಾವ ದೃಷ್ಟಿಯಿಂದ ಮೇಲು ಮನೆ ಇದೆ ಎಂಬುದನ್ನು ನಾವು ಕೊಂಚ ವಿಮರ್ಶೆಮಾಡಬೇಕು. ಮೇಲುಮನೆಯಲ್ಲಿ ವಿಮರ್ಶಿಸಿ ಬದಲಾವಣೆಯಾಗಿ ತೀರ್ಮಾನವಾದಂಥ ಕೆಲವು ಲೆಜಿಸ್ಲೇಷ್ಗಳು ಕೂಡ ಇಲ್ಲಿಗೆ ಬರಬೇಕು, ನಿಶ್ಚಯ. ಆದರೆ ಭೀಮಪ್ಪನಾಯಕರು ಹೇಳಿದಹಾಗೆ, ನಮ್ಮ ದೇಶದ ಪರಿಸ್ಥಿತಿಗೂ ಇತರ ಪ್ರಾಂತ್ಯಗಳ ಪರಿಸ್ಥಿತಿಗೂ ಇರತಕ್ಕ ವ್ಯತ್ಯಾಸ ಏನು ಎಂಬುದನ್ನು ಸ್ವಲ್ಪ ಯೋಚಿಸಿದರೆ, ನಮ್ಮಲ್ಲಿ ಈ ಸಭೆಗೆ ಬರತಕ್ಕ ಸದಸ್ಯರು ಸಾಮಾನ್ಯವಾಗಿ ಮೆಜಾರಿಟಿ ಜನಾಂಗ ಇರತಕ್ಕವರಿಗೇ ಹೆಚ್ಚಿನ ಅವಕಾಶ ಸಿಕ್ಕುತ್ತದೆ. ಅದು ಯಾವಪಕ್ಷ, ಪಾರ್ಟಿಯೇ ಆಗಿರಲಿ, ಕಾಂಗ್ರೆಸ್ ಆಗಲಿ, ಪಿ.ಎಸ್.ಪಿ. ಆಗಲಿ, ಯಾವ ಪಕ್ಷದಿಂದಲೂ ಮೈನಾರಿಟಿ ಪಂಗಡದವರು ಸಾಮಾನ್ಯವಾಗಿ ಬರಲು ಸಾಧ್ಯವಿಲ್ಲವಾಗಿದೆ. ಇದು ನಮಗೆ ಗೊತ್ತಾಗುತ್ತಿದೆ. ಅಂತಹವರ ಹಿತವನ್ನು ರಕ್ಷಿಸುವುದಕ್ಕೆ.....

Sri M. MADAIAH.—I rise to a point of order, Sir. I want to know from the Chair and I request the Chair to give its ruling, whether this question of abolition of the Upper House can be discussed by this House at the time of voting of grants.

Mr. SPEAKER.—The cut motion is to the effect that there should be a reduction of Rs. 100. It is quite relevant and it is admissible.

ಶ್ರೀ ಟಿ. ಎಸ್. ಮೂಡಲಗಿರಿಗೌಡ.—ಹೀಗೆ ಅನೇಕ ಮೈನಾರಿಟಿ ಪಂಗಡದವರಿಗೂ ಕೂಡ ರಕ್ಷಣೆಯನ್ನು ನಾವು ಕಾನೂನುಗಳನ್ನು ರಚಿಸುವಾಗ ಮಾಡಬೇಕಾದ ಸಂದರ್ಭ ಬರುತ್ತದೆ. ಅಂಥಾ ಸಂದರ್ಭದಲ್ಲಿ ನಾವು ಮೆಜಾರಿಟಿ ಪಂಗಡದವರೇ ಕುಳಿತುಕೊಂಡಿದ್ದು ಮೈನಾರಿಟಿ ಪಂಗಡದವರ ವಿಷಯದಲ್ಲಿ ಎಷ್ಟರಮಟ್ಟಿನ ರಕ್ಷಣೆ ಮಾಡುತ್ತೇವೆ ಎಂಬುದು ಬಹಳ ಮುಖ್ಯವಾದದ್ದು. ಅನೇಕವಾದಂಥ ಕೈಗಾರಿಕೆಗಳು ಮತ್ತು ಇತರ ವಿಧವಾದ ನಮ್ಮ ದೇಶದಲ್ಲಿರತಕ್ಕ ಕಲೆ ಕೈಗಾರಿಕೆ ಉದ್ಯಮಗಳು ಯಾವಯಾವುದು ಇವೆಯೋ ಅವುಗಳನ್ನು ಪ್ರತಿನಿಧಿಸುವಂಥ ತಜ್ಞರನ್ನು ಈ ಮೇಲು ಮನೆಯಲ್ಲಿ, ಆರಿಸಿ ನೇಮಕ ಮಾಡಿದ್ದೇವೆ. ಕಾನೂನುಗಳನ್ನು ರಚಿಸುವಾಗ ಎಲ್ಲರ ಅಭಿಪ್ರಾಯವನ್ನೂ ತೆಗೆದುಕೊಳ್ಳುವುದು ಸಾಧುವಾದುದು. ಹೀಗಿರುವಾಗ ನಮ್ಮ ದೇಶಕ್ಕನುಗುಣವಾಗಿ ಎರಡು ಲಕ್ಷ ರೂಪಾಯಿಗಳನ್ನು ಆ ಸಭೆಗೆ ಖರ್ಚು ಮಾಡುತ್ತಿದ್ದಾರೆಂಬುದನ್ನು ಸಂಕುಚಿತ ಭಾವನೆಯಿಂದ ಯೋಚನೆಮಾಡುವುದಾದರೆ ದೇಶವನ್ನು ಎಷ್ಟುಮಟ್ಟಿಗೆ ಕಟ್ಟಬಲ್ಲೆವು ಎಂಬುದು ಮುಖ್ಯವಾದ ವಿಷಯ. ಆದ್ದರಿಂದ ಮೇಲುಮನೆ ವಿಷಯದಲ್ಲಿ ಹಗುರವಾಗಿ ಮಾತನಾಡುವುದು ಸಾಧುವಾದುದಲ್ಲವೆಂದು ಹೇಳಿ ಕಾಲಾವಕಾಶವಿಲ್ಲದಿರುವುದರಿಂದ ಇದನ್ನು ವಿರೋಧಿಸುತ್ತೇನೆ.

Mr. SPEAKER.—The question is:

"That a sum not exceeding Rs. 12,75,700 be granted to the Government to defray the charges which will come in course of payment during the year ending 31st day of March 1955, in respect of 'General Administration (State Legislature and Election Charges)'."

The motion was adopted.

DEMAND No. 37—WORKING EXPENSES IRRIGATION WORKS.

XVII I.N.E.D. WORKS FOR WHICH CAPITAL ACCOUNTS ARE KEPT.

Mr. SPEAKER.—Motion moved:

"That a sum not exceeding Rs. 33,28,000 be granted to the Government to defray the charges which will come in course of payment during the year ending 31st day of March 1955, in respect of 'I.N.E.D. Works for which capital accounts are kept—Working Expenses'."

Water Supply to Bagepalli.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಸ್ವಾಮಿ ನನ್ನ ಖೋತಾ ಸೂಚನೆ ಈ ರೀತಿ ಇದೆ. ಅದನ್ನು ಮಂಡಿಸುತ್ತೇನೆ.

"The demand under the head 'XVII. Irrigation, Navigation, Embankment and Drainage Works for which Capital Accounts are kept—Working Expenses' for Rs. 33,28,000 be reduced by Rs. 100 (to urge the necessity of sanctioning water supply scheme to Bagepally).

ತಮಗೆ ತಿಳಿದ ಹಾಗೆ ಬಾಗೆಪಲ್ಲಿಯು ಬಹಳ ಹೈ ಫ್ಲೋಸ್, ಅಲ್ಲಿ ಬಾವಿಗಳು ಬಹಳ ಆಳ ವಾಗಿರುವುದಲ್ಲದೆ ಬೇಸಗೆ ಕಾಲ ಬಂದಾಗ ಬಾವಿಗಳಲ್ಲಿ ನೀರು ಬತ್ತಿಹೋದಾಗ ದೂರ ಹೋಗಿ ಚಿಲುಮೆಗಳನ್ನು ಮಾಡಿ ಅಲ್ಲಿಂದ ನೀರನ್ನು ಹೊತ್ತು ಕೊಂಡು ಬರಬೇಕಾಗಿದೆ. ಹೀಗೆಯೇ ಬಹಳ ವರ್ಷಗಳಿಂದ ನಡೆಯುತ್ತಿದೆ. ಏಳೆಂಟು ವರ್ಷಗಳ ಹಿಂದೆ ನೀರಿಗೆ ವ್ಯವಸ್ಥೆ ಮಾಡಬೇಕೆಂದು 18 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡಿದರೂ ಸರಿಯಾದ ಕಾರ್ಯಕ್ರಮ ಕೈಗೊಂಡಿಲ್ಲ. ಅದೂ ಅಲ್ಲದೆ 93 ಸಾವಿರ ಚಿಲ್ಲರೆ ರೂಪಾಯಿಗಳ ಸಾಲವನ್ನು ಬೇರೆ ಆ ಪ್ರಾಂತದ ನೀರು ಸರಬರಾಯಿಗಾಗಿ ಮಂಜೂರು ಮಾಡಿದೆ. ಇಷ್ಟಾದರೂ ನಮ್ಮ ಅಲ್ಲಿ ನೀರಿನ ಸೌಕರ್ಯವನ್ನೇಕೆ ಒದಗಿಸಿಲ್ಲವೋ ಗೊತ್ತಿಲ್ಲ. ದಯವಿಟ್ಟು ಈಗಲಾದರೂ ಮಾಡಿಕೊಡುತ್ತಾರೆಂದು ನಂಬಿದ್ದೇನೆ.

Mr. SPEAKER.—Cut motion moved:

"That the demand be reduced by Rs. 100."

Sri T. CHANNIAH (Minister for Public Health and Local Self-Government).—Sir, a sum of Rs. 93,300 has been sanctioned to Bagepalli towards Water Supply Scheme. The scheme has been sanctioned both administratively and technically. Tenders have been approved and the work will be commenced very early. As regards water supply to rural areas, as I have said before, we have allotted ten lakhs of rupees for 1954-55. Regarding the apportionment made to Bagepalli Taluk, certain areas would be taken up this year in the matter of new wells.

Sri B. V. NARAYANA REDDY.—I seek leave to withdraw the cut motion.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 33,28,000 be granted to the Government to defray the charges which will come in course of payment during the year ending 31st day of March 1955, in respect of 'I.N.E.D. Works for which capital accounts are kept—Working Expenses'."

The motion was adopted.

DEMAND No. 41-A. CAPITAL OUTLAY ON CIVIL WORKS.

81—CAPITAL ACCOUNT OF CIVIL WORKS.

Mr. SPEAKER.—Motion moved:

"That a sum not exceeding Rs. 28,00,000 be granted to the Government to defray the charges which will come in course of payment during the year ending 31st day of March 1955, in respect of 'Capital Account of Civil Works'."

There is a cut motion in the name of Sri Srinivasa Iyengar.

Vidhana Soudha.

Sri S. SRINIVASA IYENGAR (T-Narsipur).—I beg to move:

'That the demand under the head '81. Capital Account of Civil Works' for Rs. 28,00,000 be reduced by Rs. 100 (in order to raise a debate on the unwise step of Government in having undertaken the construction of Vidhana Soudha Building).''

Sir, the building styled as Vidhana Soudha is designed to give a floor area of 4·2 lakhs of sq. ft. It is proposed to be built in Bangalore with beautiful stones, polished granite, coloured polished stones, with lifts and six staircases. It is no doubt a magnificent edifice and a specimen of the Dravidian renaissance. Sir, the Kings of India have left behind several such monumental structures. The Moghals have left the 'Lal Killa' and the 'Taj'; the Cholas, Pandyas and Hoyasalas have left behind magnificent temples and the Congress Government, perhaps desires to leave behind this 'Vidhana Soudha'. Sir, the description of this beautiful building makes me feel that we are in a dreamland. I believe the people of Mysore are not in a position to pay for this. Sir, I have asked many a time as to what is the total rent that is being paid in Bangalore by Government to run their offices in rented buildings. Sir, it is estimated that this building would cost Rs. 60 lakhs excluding service. If the service charges are included, it would come to about a crore. We have paid it from borrowed funds. There will be a commitment to the extent of 11 lakhs per annum towards interest, depreciation and contribution towards repayment of loan. Why should Government put this burden on the people of the State? Government say that the accommodation in the Old Public Offices was not enough. The Accountant-General's Office building is under construction and would be completed soon. After they shift to that building, there would be enough space left. The amount that is being spent on Vidhana Soudha could have been used for the construction of irrigational projects instead of 'Vidhana Soudha'.

Mr. SPEAKER.—Cut motion moved:

"That the demand be reduced by Rs. 100".

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಸ್ವಾಮಿ, ಈ ಖೋತಾ ಸೂಚನೆಯನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ವಿಧಾನಸೌಧವೆಂಬುದು ಪ್ರತಿಯೊಬ್ಬರಿಗೂ ಗೊತ್ತಿದೆ. ಅನೇಕನಲ ಎದುರುಪಕ್ಷದ ಸದಸ್ಯರೂ ಸಹ ಅದನ್ನು ನೋಡಿ ಸಂತೋಷಪಟ್ಟಿದ್ದಾರೆ. ಅದರ ಅವಶ್ಯಕತೆ ಬಹಳವಾಗಿದೆ. ಈಗ ಸಾಮಾನ್ಯವಾಗಿ ಇಂಥವರ ಕಾಲದಲ್ಲಿ ವಿಧಾನಸೌಧದಿಂದ ಸರ್ಕಾರಕ್ಕೆ ದೊಡ್ಡ ಹೆಸರು ಬರುತ್ತದೆ. ಮೈಸೂರು ಸಂಸ್ಥಾನದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಈಗ ಆಫೀಸುಗಳಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಬಾಡಿಗೆ ರೂಪದಲ್ಲಿ ಕೊಡುತ್ತಿದ್ದಾರೆ. ಆ ಆಫೀಸುಗಳಿಗೆ ಈ ಕಟ್ಟಡ ಕಟ್ಟಿದರೆ ಜಾಗ ಮಾಡಿಕೊಟ್ಟು ಬಾಡಿಗೆ ಉಳಿಸಬಹುದು. ಅದಲ್ಲದೆ ಇದು ಮುಖ್ಯವಾಗಿ ನಮ್ಮ ದೇಶದ ಆಸ್ತಿಯಾಗುತ್ತದೆ. ಈಗ ಅರ್ಧಮಾಡಿ ಬಿಟ್ಟರೆ ಹಳ್ಳಿಗಳಲ್ಲಿ ಗಾದೆ ಹೇಳುವಂತೆ ಲಗ್ನಮಾಡಿ ನಿಷೇಕ ಮಾಡದೆ ಬಿಟ್ಟಂತಾಗುತ್ತದೆ. ವಿಧಾನಸೌಧ ಕಟ್ಟಬೇಕೆಂದು ನಾವು ಒಪ್ಪಿಗೆ ಕೊಟ್ಟಮೇಲೆ ಸರ್ಕಾರ ಒಪ್ಪಿ ಕಾರ್ಯಕ್ರಮ ಕೈಕೊಂಡು ಕೆಲಸ ನಡೆಸುತ್ತಿದೆ. ಆದ್ದರಿಂದ ಸಾಧುವಾದ ಈ ಕೆಲಸವನ್ನು ಜಾಗ್ರತೆ ಮುಗಿಸಲು ಹಣ ಒದಗಿಸಿ ಈ ಅಸೆಂಬ್ಲಿ ಸದಸ್ಯರು ಇರುವಾಗಲೇ ಅಲ್ಲಿ ಪೂಟಿಂಗ್ ನಡೆಯಲು ಅನುಕೂಲಮಾಡಬೇಕೆಂದು ಸೂಚಿಸಿ ಈ ಖೋತಾ ಸೂಚನೆಯನ್ನು ವಿರೋಧಿಸುತ್ತೇನೆ.

Sri S. SRINIVASA IYENGAR.—I seek leave to withdraw the cut motion.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 28,00,000 be granted to the Government to defray the charges which will come in course of payment during the year ending 31st day of March 1955, in respect of 'Capital Account of Civil Works'."

The motion was adopted.

Mr. SPEAKER.—The House will now adjourn for the day and meet tomorrow at 12 Noon.

The House adjourned at Five of the Clock to meet again on Friday, 19th March 1954, at Twelve of the Clock.

WD 1581—GPB—550—7-5-1954